**4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್.ಸಿ. ನ್ಯಾಯಾಲಯ, ಅಥಣಿ**

**ಸಿ.ಸಿ. ನಂ. 967/2015**

**ಸಾಕ್ಷಿಃ ಸಿ.ಡಬ್ಲ್ಯೂಃ 5, ಪಿ.ಡಬ್ಲ್ಯೂಃ 4**

| | |
|---|---|
| ಸಾಕ್ಷಿದಾರನ/ಳ ಹೆಸರು | : ಸಚಿನ ವಿಠ್ಠಲ ಪಾಟೀಲ |
| ತಂದೆಯ ಹೆಸರು | : ವಿಠ್ಠಲ |
| ವಯಸ್ಸು | : 32 ವರ್ಷ |
| ಉದ್ಯೋಗ | : ಖಾಸಗಿ ಕೆಲಸ |
| ವಾಸಸ್ಥಳ | : ಪಾಂಡೇಗಾಂವ, ಅಥಣಿ |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 15.12.2023**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಚಾಸಾ1 ಮತ್ತು 4 ರವರ ಪರಿಚಯ ಇರುತ್ತದೆ. ಈ ಕೇಸಿಗೆ ಸಂಬಂದಿಸಿದಂತೆ ನಾನು ಯಾವುದೇ ಪಂಚನಾಮೆಗೆ ಹಾಜರಾಗಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಾಹನವನ್ನು ಜಪ್ತಿ ಪಡಿಸಿಕೊಂಡಿಲ್ಲ. ಸಾಕ್ಷಿ ಪಂಚನಾಮೆಯಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಸಹಿಯನ್ನು ನಿ.ಪಿ.5 ಬಿ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸದ್ರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಎಪಿಪಿಯವರಿಂದಃ</u>**

ದಿ.22.02.2015 ರಂದು ನನಗೆ , ಚಾಸಾ-4 ರವರಿಗೆ ಕಿಳೇಗಾಂವ ಗ್ರಾಮದ ಹದ್ದಿಯಲ್ಲಿರುವ ಕಿಳೆಗಾಂವ ಪಾಂಡೇಗಾಂವ ಡಾಂಬರ ರಸ್ತೆ ಮೇಲೆ ಕರೆಯಿಸಿ ಚಾಸಾ1 ರವರು ತೋರಿಸಿದ ಘಟನಾ ಸ್ಥಳವನ್ನು ಪರಿಶೀಲಿಸಿ ಮತ್ತು ಪಂಚನಾಮೆ ಮಾಡುವ ಸಮಯದಲ್ಲಿ ಹಾಜರು ಸಹಕರಿಸಿಬೇಕೆಂದು ಕೋರಿಕೊಂಡ ಮೇರೆಗೆ ನಾನು ಮತ್ತು ಚಾಸಾ-4 ರವರು ಸದರಿ ಸ್ಥಳಕ್ಕೆ ಹೋಗಿದ್ದು ನಮ್ಮ ಸಮಕ್ಷಮ ಘಟನಾ ಸ್ಥಳ ಪರಿಶೀಲಿಸಿ ಬಿಳಿ ಬಣ್ಣದ ಮಹೇಂಧ್ರಾ ಬುಲೇರೋ ಮ್ಯಾಕ್ಸಿ ಟ್ರಕ ಕಂಪನಿಯ ಗೂಡ್ಸ ವಾಹನ ಮತ್ತು ಎಮಹೆಚ-10/ಎಕ್ಯೂ-9343 ನ್ನು ಮತ್ತು ಎ1 ಕಂಪನಿಯ ತಿಳಿಹಸಿರು ಬಣ್ಣದ ಸೈಕಲ ಮತ್ತು ಅದರ ಮುಂದಿನ ತಂತಿ ಕ್ಯಾರಿಯರನ್ನು ಜಪ್ತಿ ಪಡಿಸಿಕೊಂಡು ವಿವರವಾದ ಪಂಚನಾಮೆಯನ್ನು 7.30-8.45 ರವರೆಗೆ ತಯಾರಿಸಿ ಸ್ಥಳದಲ್ಲಿಯೇ ಓದಿ ಹೇಳಿ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ನಿಪಿ.6 ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾ.ದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಅದೆ.

4 ನೇ ಹೆಚ್ಚುವರಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ನ್ಯಾಯಾಲಯ ಅಥಣಿ.